ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಬಾಗೇಪಲ್ಲಿ

C.C. 74/2020 CW: 2 P.W. 2

| | |
|---|---|
| ಸಾಕ್ಷಿದಾರರ ಹೆಸರು | ಃ ಜಿ ನಾರಾಯಣಸ್ವಾಮಿ |
| ತಂದೆ/ಗಂಡನ ಹೆಸರು | ಃ ಗಂಗಪ್ಪ ಜಿ ಕೆ |
| ವಯಸ್ಸು | ಃ 40 ವರ್ಷ |
| ವೃತ್ತಿ | ಃ ದಾಳಿ ನೌಕರರು |
| ವಾಸಸ್ಥಳ | ಃ ಚಿಂತಾಮಣಿ |

**ಪ್ರಮಾಣೀಕರಿಸಲಾದ ದಿಃ 15.11.2022**

**ಮುಖ್ಯ ವಿಚಾರಣೆ ಃಃ ಸಸಅ ರವರಿಂದಃ**

2014 ರಿಂದ 2021 ರವರೆಗೆ ದಾಳಿ ನೌಕರರಾಗಿ ಚಿಂತಾಮಣಿ ವಲಯದಲ್ಲಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ದಿನಾಂಕ 17.03.2019 ರಂದು ಜಿಲಾಜಿರ್ಲಾ ರಸ್ತೆಯಲ್ಲಿ ನಾನು , ಚಾಸಾ 1, 3 ಮತ್ತು 5 ಕರ್ತವ್ಯದಲ್ಲಿದ್ದಾಗ ಸ್ಥಳದಲ್ಲಿ ವಾಹನ ತಪಾಸಣೆ ಮಡುತ್ತಿದ್ದೇವು. ಸುಮಾರು 6.15 ರ ಸಮಯದಲ್ಲಿ ಕೋಡಿಕೊಂಡ ಗ್ರಾಮದಿಂದ ಜಿಲಾಜಿರ್ಲಾ ಕಡೆಗೆ ಒಂದು ದ್ವಿಚಕ್ರ ವಾಹನ ಬಂತು ನಮ್ಮನ್ನು ನೋಡಿ ದ್ವಿಚಕ್ರ ವಾಹನ ಸವಾರ ವಾಪಸ್ಸು ತಿರುಗಿಸಿಕೊಂಡು ಹೋಗುತ್ತಿದ್ದು ಅದನ್ನು ಹಿಂಬಾಲಿಸಿ ಹಿಡಿದು ಪರಿಶೀಲಪಿಸಿದಾಗ ಬೈಕ್ ನ ಪೆಟ್ರೋಲ್ ಟ್ಯಾಂಕ್ ಮೇಲೆ ಒಂದು ಕ್ಯಾನ್ ಇತ್ತು.

2. ಅದನ್ನು ಇನ್ಸ್ ಪೆಕ್ಟರ್ ತೆಗೆದು ನೋಡಿದಾಗ 10 ಲೀಟರ್ ಸೇಂಧಿ ಇರುವುದು ಕಂಡು ಬಂದಿರುತ್ತದೆ. ನಂತರ ಸೇಂಧಿಯನ್ನು ಮತ್ತು ವಾಹನವನ್ನು ವಶಕ್ಕೆ ಪಡೆದಿರುತ್ತೇವೆ. ಒಂದು ಲೀಟರ್ ಸೇಂಧಿಯನ್ನು ರಾಸಾಯನಿಕ ಪರೀಕ್ಷೆಗೆ ತೆಗೆದಿರುತ್ತೇವೆ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ

ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

2019 ರಲ್ಲಿ ಲೋಕಸಬೆ ಚುನಾವಣೆ ಇತ್ತು ಎಂದರೆ ಸರಿ. ಸ್ಥಳದಲ್ಲಿ ಪೋಲೀಸರು ಪಂಚನಾಮೆ ಬರೆದರು ಎಂದರೆ ಸರಿ. ಪಂಚನಾಮೆಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ. ಪಂಚನಾಮೆಯನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿಪಿತ. ಪಂಚನಾಮೆಯನ್ನು 6 ರಿಂದ 6.15 ರವರಗೆಗೆ ಬರೆದಿರುತ್ತಾರೆ ಎಂದರೆ ಸರಿ. ಬೈಕ್ ಸವಾರನನ್ನು ಚಾಸಾ 4 ರವರು ವಿಚಾರಿಸಿರುತ್ತಾರೆ ಎಂದರೆ ಸರಿ.

2. ರಾಸಾಯನಿಕ ಪರೀಕ್ಷೆಗೆ ತೆಗೆದ 1 ಲೀಟರ್ ಸೇಂಧಿಯ ಬಾಟಲ್ ಅನ್ನು ಬಿಳಿ ಬಟ್ಟೆ ಸುತ್ತಿ ಸೀಲ್ ಮಾಡಿರುತ್ತೇವೆ ಎಂದರೆ ಸರಿ. ನಾನು ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಬೈಕ್ ಸವಾರ ಈ ನ್ಯಾಯಾಲಯದ ಮುಂದಿರುವ ಆರೋಪಿ ಎಂದರೆ ಸರಿ. ಸ್ಯಾಂಪಲ್ ಗೆ ತೆಗೆದ ಬಾಟಲಿ ಮೇಲೆ ನಾನು ಸಹಿ ಮಾಡಿದ್ದೇನೆ. ಅದನ್ನು ಎಮ್ ಒ ಎಂದು ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ ಃ-**

ಚಿಂತಾಮಣಿ ಕೋಲಾರ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ. ಬಾಗೇಪಲ್ಲಿ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ. ಆ ದಿನ ನಾನು ಚಿಂತಾಮಣಿಯಿಂದ ಹೊರಟಾಗ ರಾತ್ರಿ 12 ಗಂಟೆ ಆಗಿತ್ತು. ಜಿಲಾಜಿರ್ಲಾ ಕ್ಕೆ ಬಂದಾಗ ಸಮಯ ಸುಮಾರು 6 ಗಂಟೆ ಆಗಿತ್ತು. ಬಾಗೇಪಲ್ಲಿ, ಶಿಡ್ಲಘಟ್ಟ, ಗುಡಿಬಂಡೆ ವಲಯಗಳು ಚಿಂತಾಮಣಿ ವಲಯ ವ್ಯಾಪ್ತಿಗೆ ಬರುತ್ತವೆ. ಬಾಗೇಪಲ್ಲಿಯಲ್ಲಿ ಅಬಕಾರಿ ಕಛೇರಿ ಇದೆ ಎಂದರೆ ಸರಿ.

2. ಬಾಗೇಪಲ್ಲಿಯ ಇರುವ ಕಛೇರಿಯ ಸಿಬ್ಬಂದಿಗಳು ಚುನಾವಣೆ ಸಮಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ ಎಂದರೆ ಸರಿ. ನಾವು ಬಾಗೇಪಲ್ಲಿಗೆ ಬಂದಾಗ ಬಾಗೇಪಲ್ಲಿ

ಅಬಕಾರಿ ಕಚೇರಿಗೆ ಮಾಹಿತಿ ತಿಳಿಸಿಲ್ಲ ಎಂದರೆ ಅವರು ಜೊತೆಗೆ ಬಂದಿದ್ದರು. ಬಾಗೇಪಲ್ಲಿ ಅಬಕಾರಿ ನೀರಿಕ್ಷಕರಾದ ಮೋಹನ್ ಮತ್ತು ನಾಗರಾಜ್ ಬಂದಿದ್ದರು. ದಾಳಿ ಸಮಯದಲ್ಲಿ ಮೋಹನ್ ಮತ್ತು ನಾಗರಾಜ್ ಸ್ಥಳದಲ್ಲಿ ಇದ್ದರು. ನಿಪಿ 1 ರಲ್ಲಿ ಬರೆದ ವಿಷಯ ನನಗೆ ಗೊತ್ತಿದೆ.

3. ನಾನು ಮತ್ತು ಚಾಸಾ 2 ಹೊರಗುತ್ತಿಗೆ ನೌಕರರು ಎಂದರೆ ಸರಿ. ನಮಗೆ ಸಮವಸ್ತ್ರ ನೀಡಿದ್ದಾರೆ. ನಾವು ಚಿಂತಾಮಣಿಯಿಂದ ಬಂದ ವಾಹನ ಸಂಖ್ಯೆ ಕೆ ಎ 40 ಜಿ 546 ಇರುತ್ತದೆ. ಮೋಹನ್ ಮತ್ತು ನಾಗರಾಜ್ ನಮ್ಮ ಜೊತೆಗೆ ಬಂದಿರುತ್ತಾರೆ. ಚನಾವಣೆ ಸಮಯದಲ್ಲಿ ಬಾಗೇಪಲ್ಲಿಯಲ್ಲಿ ಚೇಳೂರು, ಗುಳೂರು ಮತ್ತು ಟೋಲ್ ಪ್ಲಾಜಾ 3 ಚೆಕ್ ಪೋಸ್ಟ್ ಗಳು ಇದ್ದವು. ಜಿಲಾಜಿರ್ಲಾ ಟೋಲ್ ಪ್ಲಾಜಾ ಚೆಕ್ ಪೋಸ್ಟ್ ವ್ಯಾಪ್ತಿಗೆ ಬರು'ತದೆ.

4. ಟೋಲ್ ಪ್ಲಾಜಾ ಚೆಕ್ ಪೋಸ್ಟ್ ಬಳಿ ಯಾರು ಕರ್ತವ್ಯದಲ್ಲಿ ಇದ್ದರೆಂದು ಹೇಳಲಾಗುವುದಿಲ್ಲ. ಬಿಳಿ ಬಣ್ಣದ ಕ್ಯಾನ್ ಅನ್ನು ಕಛೇರಿಗೆ ಚಾಸಾ 4 ರವರು ತಂದಿರುತ್ತಾರೆ. ಚಾಸಾ 4 ಕ್ಯಾನ್ ಅನ್ನು ತೆಗೆದಿರುತ್ತಾರೆ. 6.15 ರ ಸಮಯಕದಲ್ಲಿ ಜಿಲಾಜಿರ್ಲಾ ಕೋಡಿಕೊಂಡ ರಸ್ತೆಯಲ್ಲಿ ಜನಗಳು ಓಡಾಡುತ್ತಿರುತ್ತಾರೆ ಎಂದರೆ ಸರಿ. ಸಾರ್ವಜನಿಕರನ್ನು ಪಂಚರನ್ನಾಗಿ ಕರೆದಿದದ್ದು ಅವರು ಬಂದಿರುವುದಿಲ್ಲ. ನಾವು ಇದ್ದ ಸ್ಥಳದ ಹೆಸರನ್ನು ಅಲ್ಲಿ ತೋಟದಲ್ಲಿ ಕೆಲಸ ಮಾಡುವವರು ತಿಳಿಸಿರುತ್ತಾರೆ.

5. ಪೇಟ್ರೋಲ್ ಟ್ಯಾಂಕ್ ಮೇಲೆ ಕವರ್ ಇರಲಿಲ್ಲ. ನನ್ನ ಸಮಕ್ಷಮ ಶೋಧನಾ ಸಂಸ್ಥಿತಾ ಆಧಾರ ಬರೆದಿರುತ್ತಾರೆ. ಅದರಲ್ಲಿ ಬರೆದ ವಿಷಯ ಗೊತ್ತಿಲ್ಲ. ಅದರಲ್ಲಿ ಯಾರು ಸಹಿ ಮಾಡಿದ್ದಾರೆ ಗೊತ್ತಿಲ್ಲ. ದ್ವಿ ಚಕ್ರ ವಾಹನದ ಸಂಖ್ಯೆ ಕೆ ಎ 40 ಇ ಬಿ 6030 ಇರುತ್ತದೆ. ಸ್ಯಾಂಪಲ್ ಗೆ 1 ಲೀಟರ್ ನಾನೇ ಪ್ರತ್ಯೇಕ 74 ವಾಗಿ ತೆಗೆದಿರುತ್ತೇನೆ. ಚಾಸಾ 4 ರವರು ಅದನ್ನು ಸೀಲ್ ಮಾಡಿರುತ್ತಾರೆ. ಪಂಚನಾಮೆಗೆ ಚಾಸಾ 2 ಮತ್ತು 3 ಸಹಿ ಮಾಡಿರುತ್ತಾರೆ.

ಪಂಚನಾಮೆ ಸ್ಥಳದ ಚೆಕ್ಕು ಬಂದಿ ನೆನಪಿಲ್ಲ. ಪಂಚನಾಮೆ ಬರೆದಾಗ ಸಮಯ ಸುಮಾರು 7.15 ಆಗಿತ್ತು. ಮಾದರಿ ಸೀಲ್ ಗಳ ನಕಲಿಗೆ ನಾನು, ಚಾಸಾ 2 ಮತ್ತು ಚಾಸಾ 3 ಸಹಿ ಮಾಡಿದ್ದೇವೆ.

6. ಯಾವ ದಿನ ಹೇಳಿಕೆ ನೀಡಿದ್ದೇನೆ ನೆನಪಿಲ್ಲ. ಆ ದಿನ ನಾನು ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿ ಅಲ್ಲಿಗೆ ಬಂದಿಲ್ಲ ಎಂದರೆ ಸರಿಯಲ್ಲ. ಯಾವುದೇ ವಸ್ತುಗಳನ್ನು ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪಂಚನಾಮೆ ತಯಾರಿಸಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನನ ನಾು ಕರ್ತವ್ಯ ದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಅಂಕಿ ಅಂಶಗಳ ಉದ್ದೇಶದಿಂದ ಆರೋರಿಪಿಯ ವಿಳಿರುದ್ಧ ಪ್ರಕರಣ ದಾಖಲಿಸಿ ಮೇಲಾಧಕಾರಿಯವರು ಮಾತ್ತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತಿತದೆದಃನೆ ಎಂದರೆ ಸರಿಯಲ್ಲ. ಬಿಳಿ ಬಣ್ಣದ ಕ್ಯಾನ್ ಮತ್ತು ವಾಹನವನ್ನು ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲಿನ ರೀತಿಯ ಬಾಟಲಿಗಳು ಬೇರೆ ಕಡೆ ಸಿಗುತ್ತವೆ ಎಂದರೆ ಸರಿ. ಅದರಲ್ಲಿ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

**ಮರುವಿಚಾರಣೆ ಃ ಇರುವುದಿಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಜೆಎಂಎಫ್‌ಸಿ ., ಬಾಗೇಪಲ್ಲಿ